## ಜೈ ಗುರುದೇವ

### ಅಧ್ಯಾಯ ೧ — ಗುರುದೇವನ ಜನನ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

೪೮. ಅತ್ತಲಂತಿರಲು ಕಾಮಾರಪುಕುರದಲಿ ।
ಮಹಿಳೆಯರು ಮೂವರೊಡನಿರಲು ನಮ್ಮಜ್ಜಿ ॥

೪೯. ಶಿವದೇವ ಮಂದಿರವ ಹೊಂದಿದಂಗಳದಿ ।
ದಿವ್ಯ ತೇಜವು ಆಗ ಗಾಳಿಯಾರೂಪದಲಿ ॥

೫೦. ಸುಳಿದು ಮಿಂಚಿನ ತೆರದಿ ತನ್ನ ಗರ್ಭವನು ।
ಹೊಳೆದಿಳಿದು ಹೊಕ್ಕಂತೆ ಕಂಡು ಚೋದ್ಯವನು ॥

೫೧. ಭಯಭಕ್ತಿಯಿಂದ ತಾ ಪೇಳಿದಳು ಆ ಬಗೆಯ ।
ಲಲನೆಯರು ಕೇಳಿ ತಾಳಿದರು ಅಚ್ಚರಿಯ ॥

೫೨. ಆ ಗ್ರಾಮದವರು ಈ ಕುರಿತು ಮಾತಾಡೆ ।
ಮೂಕವಿಸ್ಮಿತಳಾದಳಜ್ಜಿ ಭ್ರಮೆಗೂಡಿ ॥

೫೩. ಆ ಮೂರು ಮಹಿಳೆಯರೊಳೊಬ್ಬಳು ಸುದೈವಿ ।
ಕಮ್ಮಾರ ಕನ್ಯೆ ಧನಿಯುತ್ಕೃಷ್ಟ ಜೀವಿ ॥

೫೪. ಅವಳ ಕತೆಯನು ಮುಂದೆ ಪೇಳ್ವೆನೋರಂತೆ ।
ಈಗವಳು ಬದುಕಿಲ್ಲವಾದರೇನಂತೆ ॥

೫೫. ಗುರುದೇವನನು ಮಾತೃಭಾವದಲಿ ನೋಡಿ ।
ಹಿರಿಮೆಯನು ಪಡೆದವಳ ನೆನಪನಾಕೂಡಿ ॥

೫೬. ಅವಳ ಪಾದವ ಪಿಡಿದು ವಂದನೆಯ ಮಾಡಿ ।
ಪದಧೂಳಿಯನು ಕಣ್ಣಿಗೊತ್ತಿಕೊಳಲಾಗಿ ॥

೫೭. ಮನದಿ ಹಂಬಲಿಸುತಿಹೆ ಜಾತಿಯಿಂದೇನು ।
ಘನತೆ ದೈವೇಚ್ಛೆಯಿಂ ದೊರಕದೇನು ॥

೫೮. ಜಗದ ಪಾಪವ ತೊಳೆವ ಜಾಹ್ನವೀ ಸದೃಶ ।
ಕಾಮಿತಾರ್ಥವನೀವ ಕಲ್ಪವೃಕ್ಷ ॥

೫೯. ದೀನರಕ್ಷಕ ವಿಶ್ವಬಂಧು ಗುರುದೇವ ।
ಧನಿಯನಮ್ಮಾ ಎಂದೇ ಕರೆದನಹಹ ॥

೬೦. ಆ ಸೌಭಾಗ್ಯಶಾಲಿಗಿಹುದಾವ ಕುಲವು ।
ಭೇದಭಾವವ ಮರೆಸಿ ಮಣಿಯುತಿದೆ ಮನವು ॥

೬೧. ಆ ಧನಿಯ ಪದಧೂಳಿಯನು ಬೇಡುತಿರುವೆ ।
ಆದರದಿ ಸ್ಮರಿಸಿ ಆಶೀರ್ವಾದ ಕೇಳ್ವೆ ॥

೬೨. ಶ್ರೀರಾಮಕೃಷ್ಣರನು ಪ್ರೀತಿಸುವ ಜನರು ।
ಆರಾಧ್ಯರೆನಗವರು ಶ್ರೇಷ್ಠರೆನಿಸುವರು ॥

೬೩. ಗುರುದೇವನನು ದ್ವೇಷಿಸುವ ಬ್ರಾಹ್ಮಣನನು ।
ದುರಿತಾಧಮನೆಂದು ತಿಳಿದು ತ್ಯಜಿಸುವೆನು ॥

#### ಗುರುದೇವನ ಆವಿರ್ಭಾವ

೬೪. ಯಾತ್ರಾವಿಧಿಯ ಮುಗಿಸಿ ಖುದಿರಾಮುಪಾಧ್ಯ ।
ತಾ ತಿರುಗಿ ತನ್ನ ಮನೆಯೆಡೆಗೆ ನಡೆತಂದ ॥

೬೫. ಪತಿಯನ್ನು ಪರಿಕಿಸುತ ಚಂದ್ರಮಣಿದೇವಿ ।
ತನಗಾದ ಅನುಭವವ ವಿವರಿಸಲು ಭಯದಿ ॥

೬೬. ಸಂಗತಿಯ ತಿಳಿದು ಭೂಸುರನು ಯೋಚಿಸುತ ।
ಅಂದು ಗಯೆಯಲಿ ಕಂಡ ಕನಸ ಧ್ಯಾನಿಸುತ ॥

೬೭. ಅಂಗನೆಯೊಳರುಹಿದನು ಅನ್ಯರೊಡನಿದನು ।
ಪೇಳದಿರು ಮನದೊಳಗೆ ತಾಳು ಧೈರ್ಯವನು ॥

೬೮. ಗರ್ಭಿಣಿಯು ನೀನು ಕಾತರಿಸಬೇಡದಕೆ ।
ಸರ್ವಕೂ ಹೊಣೆ ದೇವನಲ್ಲವೇ ಜಗಕೆ ॥

೬೯. ಇಂತು ಸಂತವಿಸೆ ದಿನ ಕಳೆಯುತ್ತ ಇರಲು ।
ಗರ್ಭವರ್ಧಿಸಲು ಶಶಿಮಣಿ ಶೋಭಿಸಿದಳು ॥

೭೦. ಕಂಡವರ ಮನಸೆಳೆವ ಚೆಲುವು ಮೊಳೆತು ।
ಸೌಂದರ್ಯ ತೇಜಸ್ಸು ಕೂಡಿ ರಾಜಿಸಿತು ॥

೭೧. ಮಾನವಾತೀತ ಭಾವನೆಗೆ ಒಳಗಾಗಿ ।
ಧ್ಯಾನಿಸುವಳೊಮ್ಮೊಮ್ಮೆ ಆತ್ಮಪರಳಾಗಿ ॥

೭೨. ಕೆಲವೊಮ್ಮೆ ಪೇಳುವಳು ಸಹಜ ಭಾವದೊಳು ।
ತಿಳಿಯದಾರಿಗು ಎನ್ನ ಗರ್ಭಜಾಲವದು ॥

೭೩. ನನ್ನವರಿಗೂ ತಿಳಿಯದಿದರ ಒಳಮರ್ಮ ।
ಧನ್ಯತೆಯ ಗಳಿಸಿತೆನ್ನಯ ಮನೋಧರ್ಮ ॥

೭೪. ದೇವದೇವತೆಗಳಾಕೃತಿಯ ಬಹುಬಗೆಯ ।
ಭಾವದಲಿ ಕಾಣುತಿಹೆ ಬಲು ಚಮತ್ಕೃತಿಯ ॥

೭೫. ನಾನಾವಿಧದ ನಾದ ಕೇಳುತಿದೆ ಮನಕೆ ।
ಏನಿದೀ ವಿಸ್ಮಯ ವಿಚಿತ್ರ ಚಟುವಟಿಕೆ ॥

೭೬. ಚಂದ್ರಮಣಿ ವರ್ತಿಸುವ ರೀತಿಯನು ನೋಡಿ ।
ನೊಂದರಾ ಊರಜನ ಯೋಚನೆಯ ಕೂಡಿ ॥

೭೭. ಮಧ್ಯವಯವೂ ಮೀರಿದೀಕಾಲದಲ್ಲಿ ।
ಗರ್ಭಧರಿಸಿಹಳಿವಳು ಇಳಿಪ್ರಾಯದಲ್ಲಿ ॥

೭೮. ಎಣೆಯಿಲ್ಲದಾ ಕಾಂತಿ ಹೊಮ್ಮುತಿವೆಯಲ್ಲ ।
ದಿನದಿನಕು ನಡೆನುಡಿ ವಿಚಿತ್ರವಾಯ್ತಲ್ಲ ॥

೭೯. ಭೂತವೋ ಪಿಶಾಚವೋ ಹಿಡಿಯಿತೇನಿವಳ ।
ಬಲು ಭ್ರಮಿಷ್ಠರ ತೆರದಿ ವರ್ತಿಸುವಳಲ್ಲ ॥

೮೦. ಮಗುವ ಪಡೆವಳೋ ಮೃತಿ ತಳೆವಳೋ ಎಂದು ।
ಬಗೆಬಗೆಯ ಚಿಂತೆಯೊಳಿರಲು ಮನನೊಂದು ॥